# ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಬೆಳಗಾವಿ.

ಓ.ಎಸ್ ನಂಃ 557/2010

ಡಿ .ಡಬ್ಲ್ಯೂ- 2

ದಿ. 6-08-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಶ್ರೀ. ಎ ಐ ಜೆ ವಕೀಲರಿಂದ ಃ-

ನಮ್ಮ ಮನೆತನದಲ್ಲಿ ಮೂಲವಾಗಿ 5 ಬ್ರ್ಯಾಂಚಗಳಿತ್ತು. ಅವರುಗಳು ಗುಂಡು ಕಾರ್ಲೆಕರ, ಯಶವಂತ ಕಾರ್ಲೆಕರ, ರಾಮಾ ಕಾರ್ಲೆಕರ, ದಾಖಲು ಕಾರ್ಲೆಕರ, ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ. ಕಾರ್ಲೆಕರ ಮನೆತನಕ್ಕೆ ಸರ್ವೆ ನಂ.220, 222, ಮತ್ತು ಇನ್ನೂ ಮೂರು ನಾಲ್ಕು ಜಮೀನು ಇದ್ದವು. ನನಗೆ ಆ ಸ್ವತ್ತಿನ ಸರ್ವೆ ನಂಬರುಗಳು ಹೇಳಲು ಬರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.

# ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಬೆಳಗಾವಿ.

ಓ.ಎಸ್ ನಂಃ 233ಃ 2014

ಪಿ.ಡಬ್ಲೂ- 1

ದಿ. 31-07-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ ಶ್ರೀ. ಎಸ್ ಆರ್ ಎಸ್ ಪ್ರತಿ ವಾದಿ ಪರ ವಕೀಲರಿಂದ ಃ-

ನಾನು ನನ್ನ ಕಳೆದ ಪಾಟೀ ಸವಾಲಿನ ನಂತರ ಪೋಡಿ ಆದೇಶದ ವಿರುದ್ಧ ಅಪೀಲು ಸಲ್ಲಿಸಿರುವುದಿಲ್ಲ. ನಾನು ಪೋಡಿ ಮರು ಅಳತೆ ಮಾಡುವ ಪ್ರಯತ್ನ ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು ಅದರ ಅವಶ್ಯಕತೆ ಇಲ್ಲಎಂದು ನುಡಿಯುತ್ತಾರೆ. ಪೋಡಿ ಆಗುವ ಮೊದಲು ನ್ಯಾಶನಲ್ ಹೈ ವೇ ಅಥೋರಿಟಿ ಅಕ್ವೈಯಿರ್ ಮಾಡಿರುವುದರಿಂದ ನಾನು ಮರು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಹೈ ವೇ ಅಥೋರಿಟಿ ಪೋಡಿ ಆಗುವ ಮೊದಲು ಎಕ್ಸಪೋನ್ಸನ್ ಮಾಡಿರುತ್ತದೆ. ಸದರಿ ಎಕ್ಸಪೋನ್ಸನ್ ಈ ದಾವೆ ಹುಡುವ ಮೊದಲು ಮಾಡಿದ್ದಾಗಿರುತ್ತದೆ. ಎಕ್ಸಪೋನ್ಸನ್ ದಿ.10-4-2014 ಆಗಿರುತ್ತದೆ ಎಂದರೆ ಸರಿ. ನಾನು ದಿ.2-2-2015 ರಲ್ಲಿ ನಾನು ಈ ದಾವೆಯಲ್ಲಿ ವಾದ ಪತ್ರ ತಿದ್ದುಪಡಿಕೋರಿದಾಗ ನನಗೆ ಪೋಡಿ ಆಗುವ ಮೊದಲು ಎಕ್ಸಪೋನ್ಸನ್ ಆಗಿರುವುದು ತಿಳಿದಿತ್ತು ಎಂದರೆ ಸರಿಯಲ್ಲ. ನಾನು ತಿದ್ದುಪಡಿ ವಾದಪತ್ರದೊಂದಿಗೆ ಮರು ಕೈ ನಕ್ಷೆ ನೀಡಿರುತ್ತೇನೆ.. ನಾನು ನೀಡಿರುವ ಕೈ ನಕ್ಷೆ ನಿಡಿ-1 ರಂತೆ ಇಲ್ಲ ಎಂದರೆ ಸಾಕ್ಷಿಯು ತನ್ನ ಕೈ ನಕ್ಷೆ ಲ್ಯಾಂಡ ರೆವಿನ್ಯೂ ರೆಕಾರ್ಡ ರಂತೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಕೈ ನಕ್ಷೆ ಲ್ಯಾಂಡ ರೆವಿನ್ಯೂ ರೆಕಾರ್ಡ ರಂತೆ ಇಲ್ಲ ಎಂದರೆ ಸರಿಯಲ್ಲ. ನಾನು ತಿದ್ದುಪಡಿ ಮೂಲಕ ಏರಿಯಾ ಬದಲಾವಣೆ ಮಾಡಿರುವುದಿಲ್ಲ. ಪೋಡಿ ಆಗುವ ಮೊದಲು ಈ ದಾವೆಯನ್ನು ತಪ್ಪಾಗಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಾನು ವೊದಲು ದಾವೆ ಸಲ್ಲಿಸುವಾಗ 13 ಗುಂಟಾ 13 ಆಣಾ ನ್ಯಾಶನಲ್ ಹೈ ವೇ ಅಥೋರಿಟಿ ಅಕ್ವೈಯಿರ್ ಮಾಡಿಕೊಟ್ಟಿತ್ತು ಎಂದು ಹೇಳಿದ್ದು ತಪ್ಪ ಇರುತ್ತದೆ. ತಿದ್ದುಪಡಿ ಮಾಡಿರುವ ವಾದ ಪತ್ರ ಸರಿ ಇರುತ್ತದೆ.

ಪ್ರಶ್ನೆಃ ತಿದ್ದುಪಡಿ ಆದ ನಂತರ 6 ಗುಂಟೆ 8 ಆಣಾ ಅತೀಕ್ರಮಣ ಆಗಿದೆ

ಎಂದುತೋರಿಸಲು ಯಾವುದಾದರೂ ಮ್ಯಾಪನ್ನು ಹಾಜರುಪಡಿಸಿದ್ದೀರಾ?
ಉತ್ತರಃ ಕೈ ನಕ್ಷೆ ಹಾಜರುಪಡಿಸಿದ್ದೇವೆ.



ನಾನು ತಿದ್ದುಪಡಿ ಆದ ನಂತರ ಹಾಜರುಪಡಿಸಿರುವ ಕೈ ನಕ್ಷೆಯಲ್ಲಿ ವಿಸ್ತೀರ್ಣ ತೋರಿಸಲಾಗಿಲ್ಲ ಎಂದರೆ ಸಾಕ್ಷಿಯು ಕೆಂಪು ಬಣ್ಣದಲ್ಲಿ ತೋರಿಸಿರುವ ಜಾಗವು ಅತಿಕ್ರಮಣ ಜಾಗ ಆಗಿರುತ್ತದೆ ಎಂದು ನುಡಿಯುತ್ತಾರೆ ಕೈ ನಕ್ಷೆ ಯನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಖಾಸಗೀ ಸರ್ವೆ ಮಾಡಿಸಿದಾಗ ಖಾಸಗೀ ಸರ್ವೆ ಯರ್ ಅತೀಕ್ರಮಣದ ವಿಸ್ತೀರ್ಣ ನೀಡಿರುತ್ತಾರೆ ಸದರಿ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ. ನನಗೆ ಖಾಸಗೀ ಸರ್ವೆಯರ್ ಹೆಸರು ನೆನಪಿಲ್ಲ. ಖಾಸಗೀ ಸರ್ವೆಯರ್ ನನಗೆ ಮ್ಯಾಪನ್ನು ನೀಡಿರುವುದಿಲ್ಲ. ನನಗೆ ಖಾಸಗೀ ಸರ್ವೆಯರನಿಂದ ಖಚಿತ ಅತಿಕ್ರಮಣದ ವಿಸ್ತೀರ್ಣ ಪಡೆಯಲು ಯಾವುದೇ ತೊಂದರೆ ಇರಲಿಲ್ಲ. ನಾನು ಖಾಸಗೀ ಸರ್ವೆ ಮಾಡಿಸಿರುವುದಿಲ್ಲ. ನ್ಯಾಶನಲ್ ಹೈ ವೇ ಅಥೋರಿಟಿ ಪಡೆದ ಜಾಗವನ್ನು ಅತೀಕ್ರಮಣ ಎಂದು ತೋರಿಸುತ್ತಿದ್ದೇನೆ ಎಂದರೆ ಸರಿಯಲ್ಲ ಶೃತಿ ಸೋನಲ್ ಎಂಬ ತಾಲೂಕು ಸರ್ವೆಯರ್ ಅಳತೆ ಮಾಡಲು ಹೋದಾಗ ಪ್ರತಿವಾದಿಗಳು ಈ ದಾವೆಯು ಬಾಕಿ ಇರುವುದನ್ನು ತಿಳಿಸಿದ್ದರಿಂದ ಸರ್ವೇಯರ್ ಅಳತೆ ಮಾಡಿರುವುದಿಲ್ಲ. ನಾನು ತಾಲೂ ಸರ್ವೇಯರಿಂದ ಈ ಕುರಿತು ಬರವಣಿಗೆಯಲ್ಲಿ ನೋಟಿಂಗ ಪಡೆದಿರುವುದಿಲ್ಲ. ತಾಲೂ ಸರ್ವೇಯರ ದಾವೆ ಇತ್ಯರ್ಥವಾದ ನಂತರ ಅಳತೆ ಮಾಡುವುದಾಗಿ ಹೇಳಿರುತ್ತಾರೆ. ನಾನು ಸಲ್ಲಿಸಿದ ಅರ್ಜಿಯ ಬಗ್ಗೆ ಯಾವುದೇ ದೃಢಿಕೃತ ಪ್ರತಿ ಪಡೆದಿರುವುದಿಲ್ಲ. ತಾಲೂ ಸರ್ವೇಯರ ಹೇಳಿದ ನಂತರ ಈ ದಾವೆಯಲ್ಲಿ ಕೊರ್ಟ ಕಮಿಷನರ ನೇಮಕ ಮಾಡಲು ಅಡಚಣೆ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ಅತೀಕ್ರಮಣ ಆಗಿಲ್ಲವಾದ್ದರಿಂದ ಕೊರ್ಟ ಕಮಿಷನರನೇಮಿಸಲು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸ್ವತ್ತನ್ನು ಮಾರಟ ಮಾಡಿ ಪ್ರತಿವಾದಿಗಳಿಂದ ರಸ್ತೆಗಾಗಿ ಜಾಗ ಬೇಕೆಂದು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಶ್ರೀರಾಮ ಡವಲಪ್ರಸಗೆ ನನ್ನ

ಬೇರೆ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ. ದಾವಾ ಸ್ವತ್ತಿಗೂ ಅದಕ್ಕೂ ಸಂಬಂಧ ಇಲ್ಲ. ನಾನು ಮಾರಾಟ ಮಾಡಿದ ಸ್ವತ್ತು ಪ್ರತಿವಾದಿಯ ಸ್ವತ್ತಿನ ಹಿಂದೆ ಬರುತ್ತದೆ ಎಂದರೆ ಸರಿ. ನನಗೆ ಪ್ರತಿವಾದಿಯ ಸ್ವತ್ತನ್ನು ಹೊರತುಪಡಿಸಿ ಬೇರೆ



ಜಾಗ ಓಡಾಡಲು ಇಲ್ಲ ಎಂದರೆ ಸರಿಯಲ್ಲ. ನಾನು ಮಾರಾಟ ಮಾಡಿದ ನಂತರ ನನಗೆ ಓಡಾಡಲು ರಸ್ತೆ ಇಲ್ಲದ್ದರಿಂದ ಪ್ರತಿವಾದಿಯಿಂದ ಅತೀಕ್ರಮಣವಾಗಿದೆ ಎಂದು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಅತೀಕ್ರಮಣವಾಗಿರುವುದನ್ನು ಹೊರತುಪಡಿಸಿ ನನ್ನ ಬಳಿ 6 1/2 ಗುಂಟೆ ಹೊರತುಪಡಿಸಿ ಉಳಿದ ಸ್ವತ್ತು ಉಳಿದಿರುತ್ತದೆ. ನನ್ನ ಉಳಿದಿರುವ ಜಾಗ ದಕ್ಷಿಣಕ್ಕೆ ಬರುತ್ತದೆ. ನಾನು ಉಳಿದಿರುವ ನನ್ನ ಜಾಗಕ್ಕೆ ಪೆನ್ಸಿಂಗ ಹಾಕಿರುವುದಿಲ್ಲ. ಈಗ ಉಳಿದಿರುವ ನನ್ನ ಸ್ವಾಧೀನದಲ್ಲಿರುವ ಜಾಗ ಆರ್ ಎಸ ನಂ.29 ರಲ್ಲಿ ನನ್ನ ಕೈ ನಕ್ಷೆಯಲ್ಲಿ ಉಲ್ಲೇಖ ಮಾಡಿರುವ ಜಾಗ ಆಗಿರುತ್ತದೆ. ನನ್ನ ಕೈ ನಕ್ಷೆ ಪ್ರಕಾರ ಅತೀಕ್ರಮಣ ಆಗಿರುವ ಜಾಗ ಪ್ರತಿವಾದಿ ಸ್ವಾಧೀನದಲ್ಲಿದೆ. ನನ್ನ ಕೈ ನಕ್ಷೆಯಲ್ಲಿ ತೋರಿಸಿರುವ ಹಾಗೆ ನಂತರದ್ದು ಅಥವಾ ಮೊದಲಿನದ್ದೋ ಎಂದರೆ ಸಾಕ್ಷಿಯು ಪೋಡಿಗೂ ಅದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಿಪಿ-5 ರಂತೆ ಪ್ರತಿವಾದಿ ತನ್ನ ಸ್ವತ್ತನ್ನು ಖರೀದಿಸುವ ಮೊದಲು ಕಂಪೌಂಡ ಮತ್ತು ಗೇಟ್ ಇತ್ತು ಎಂದರೆ ಸರಿಯಲ್ಲ. ನಿಪಿ-5 ಪ್ರತಿವಾದಿಯ ಖರೀದಿ ಪತ್ರದ ಮೊದಲು ತೆಗೆದ ಪೋಟೋ ಆಗಿರುತ್ತದೆ ಎಂದರೆ ಸರಿ. ನಿಪಿ-2 ರಲ್ಲಿ ವಿಸ್ತೀರ್ಣ ನಮೂದಾಗಿಲ್ಲ ಎಂದರೆ ಸರಿ. ನಿಪಿ-3 ಮತ್ತು 4 ನ್ನು ಪೋಡಿ ಮತ್ತು ತಿದ್ದುಪಡಿ ವಾದಪತ್ರ ಸಲ್ಲಿಸಿದ ನಂತರ ತೆಗೆದಿದ್ದು ಎಂದರೆ ಸರಿಯಲ್ಲ ನನ್ನ ಸ್ವತ್ತನ್ನು ನ್ಯಾಶನಲ್ ಹೈ ವೇ ಅಥೋರಿಟಿ ಅಕ್ವೈಯಿರ್ ಮಾಡಿಕೊಂಡು ನನಗೆ ನನ್ನ ಉಳಿದ ಸ್ವತ್ತನ್ನು ತಲುಪಲು ಜಾಗ ಇಲ್ಲದ್ದರಿಂದ ಪ್ರತಿವಾದಿಯ ಮೇಲೆ ಅತೀಕ್ರಮಣ ಮಾಡಿದ್ದಾರೆ ಎಂದು ಸುಳ್ಳು ದಾವೆ

ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸ್ವತ್ತನ್ನು ಖರೀದಿಸಿದ ನಂತರ ಅವರ ಸ್ವತ್ತಿನ ವಿಸ್ತೀರ್ಣ ಬದಲಾಗಿರುವುದಿಲ್ಲ ಎಂದರೆ ಸಾಕ್ಷಿಯು ಗೇಟು ಮತ್ತು ಕಂಪೌಂಡ ವಾಲನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಗೇಟ ಮತ್ತು ಕಂಪೌಂಡ ತೋರಿಸಲು ಕೈ ನಕ್ಕೆ



ಮತ್ತು ಪೊಟೋ ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳು ಅತೀಕ್ರಮಣ ಮಾಡಿರುವುದಿಲ್ಲ ಮತ್ತು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.

ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಹಿಂದಿ ( ಮರಾಠಿ ) ಭಾಷೆ ಬರುತ್ತಿದ್ದು ವಾದಿ ಮತ್ತು ಪ್ರತಿವಾದಿ ಪರ ವಕೀಲರಿಗೆ ಮತ್ತು ನ್ಯಾಯಾಲಯಕ್ಕೆ ಹಿಂದಿ ( ಮರಾಠಿ ) ಭಾಷೆ ಬರುತ್ತಿದ್ದು ನ್ಯಾಯಾಲಯವು ಸ್ವತಹ ಕನ್ನಡ ಭಾಷ್ಷೆಗೆ ತರ್ಜುಮೆ ಮಾಡಲಾಯಿತು .

(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀಮತಿ ಎಎಸ್ ಜೆ ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷ್ಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ . )

ಪ್ರತಿವಾದಿ ವಕೀಲರಿಗೆ ಕನ್ನಡ ಭಾಷ್ಷೆ ಬಾರದ ಕಾರಣ ಹಿಂದಿ ಭಾಷ್ಷೆಯಲ್ಲಿ ಕೇಳಿ ಪಾಟೀ ಸವಾಲು ಕನ್ನಡ ಭಾಷ್ಷೆಗೆ ತರ್ಜುಮೆ ಮಾಡಿಕೊಳ್ಳಲಾಯಿತು .

ಅಅಅಅ

ಯೂಸುಫ್ ಖಾನ್ ಬಡೇವಾಲ್

ಸುಲೇಮಾನ್ ಖಾನ್ , ಖಾಸಿಮನ್ ಖಾನ್ ಮತ್ತು ಬಹದ್ದೂರ್ ಖಾನ್

ಸಿಟಿ ಸರ್ವೆ ನಂ .4349 ಎ ಮತ್ತು ಸಿಟಿ ಸರ್ವೆ ನಂ .4349 ಬಿ

ಅಂದರೆ ಸರಿಯಲ್ಲ

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

ಪ್ರತಿವಾದಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು .

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.